# ಉದಯವಾಣಿ

ಜನಮನದ ಜೀವನಾಡಿ

www.udayavani.com | Hubballi ಹುಬ್ಬಳ್ಳಿ | ಭಾನುವಾರ, ಏಪ್ರಿಲ್ 1, 2018 | ಪುಟ 12+8 | ₹ 5.00 | ಮಣಿಪಾಲ | ಬೆಂಗಳೂರು | ಹುಬ್ಬಳ್ಳಿ | ಕ


ಗುತ್ತಿಗೆದಾರರ ಕೆಲಸಗಾರರು ಕಲಸ ಬಸವರಾಜ ಕಲಶೆಟ್ಟಿ ಹಾಗೂ ಬಿಜೆಪಿ ಪಟ್ಟಿಗೆ ಸೇರಿಸಿ ಹೊಸದಾಗಿ ಟೆಂಡರ್ ಪಾಟೀಲ ಉಪಸ್ಥಿತರಿದ್ದರು.

ಎರಡು ತಿಂಗಳಿಂದ ನಡೆಯುತ್ತಿದೆ ಅಭಿವೃದ್ಧಿ ಕಾರ್ಯ, ಐದು ಕೆರೆಗಳ ಕಾರ್ಯ ಪೂರ್ಣ

# ಬನವಾಸಿಯಲ್ಲಿ ಹತ್ತು ಕೆರೆಗಳ ಪುನಶ್ಚೇತನ

ಜಲ ಸಂಕಟ ನಿವಾರಣೆಗೆ

**ಶಿರಸಿ:** ಮೊದಲಿನಿಂದಲೂ ಬನವಾಸಿ ಹೋಬಳಿ ಮೈತುಂಬ ಕೆರೆಗಳು ಇದ್ದರೂ ಜಲ ಸಂಕಟ ಎದುರಿಸುತ್ತಿದ್ದು, ಈ ಭಾಗದ ಕೆರೆಗಳ ಅಭಿವೃದ್ಧಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಮನುವಿಕಾಸ ಸಂಸ್ಥೆ ಮುಂದಾಗಿ ಸುತ್ತ ಮುತ್ತಲಿನ ಹತ್ತು ಕೆರೆಗಳ ಅಭಿವೃದ್ಧಿ ಮಾಡುತ್ತಿದೆ.

ಮನುವಿಕಾಸ ಸಂಸ್ಥೆ ಬನವಾಸಿ ಹೋಬಳಿಯಲ್ಲಿ 10 ಕೆರೆಗಳ ಪುನರುಜ್ಜೀವನ ಕಾರ್ಯವನ್ನು ಕೋಕಾಕೋಲಾ ಇಂಡಿಯಾ ಫೌಂಡೇಶನ್ ಸಹಕಾರದಿಂದ ಹಮ್ಮಿಕೊಂಡಿದೆ. ಸುಮಾರು 2 ಕೋಟಿ ಅಂದಾಜು ಮೊತ್ತದ ಯೋಜನೆಯಲ್ಲಿ ಶೇ.50 ರಷ್ಟು ಪಾಲುದಾರಿಕೆಯನ್ನು ರೈತರು ನಿರ್ವಹಿಸಿದ್ದಾರೆ. ರೈತರು ಹೂಳನ್ನು ಸ್ವಂತ ಖರ್ಚಿನಲ್ಲಿ ಹೊಲಗಳಿಗೆ ಸಾಗಿಸುವ ಮೂಲಕ ಸಂಪೂರ್ಣ ಸಹಕಾರ ನೀಡಿ ಈಗಾಗಲೇ ಈ ಹೋಬಳಿಯ 5 ಕೆರೆಗಳನ್ನು ಸಂಪೂರ್ಣ ಅಭಿವೃದ್ಧಿಪಡಿಸಲಾಗಿದೆ.

ಈವರೆಗೆ ಮನುವಿಕಾಸ ಸಣ್ಣ ಕೆರೆಗಳು ಮತ್ತು ಕೃಷಿ ಹೊಂಡಗಳನ್ನು ರೈತರಿಗೆ ಕಡಿಮೆ ದರದಲ್ಲಿ ಅಭಿವೃದ್ಧಿಪಡಿಸುವ ಕೆಲಸ ನಿರ್ವಹಿಸಿದೆ. ಈ ಸಂಸ್ಥೆ ಈಗಾಗಲೇ ಸುಮಾರು 2500 ಸಣ್ಣ ಕೆರೆಗಳನ್ನು ಅಭಿವೃದ್ಧಿಪಡಿಸಿದೆ. ತಾಲೂಕಿನ ಪೂರ್ವ ಭಾಗ ಸಂಪೂರ್ಣ ಬರಪೀಡಿತ ಪ್ರದೇಶವಾಗಿದ್ದು ವರದಾ ನದಿ ದಡದಲ್ಲಿರುವ ಹಳ್ಳಿಗಳು ನೀರಾವರಿಗಾಗಿ ಕೆರೆಗಳನ್ನೇ ಅವಲಂಬಿಸಿವೆ. ಬೇಸಿಗೆಯಲ್ಲಿ ವರದೆಯ ಹರಿವೂ ಕಡಿಮೆ ಆಗಿ ಎಲ್ಲಕಡೆ ನೀರಿನ ಬವಣೆ ಪ್ರಾರಂಭವಾಗುತ್ತದೆ. ಇದರ ನಿವಾರಣೆಗೆ ಕೆರೆ ಅಭಿವೃದ್ಧಿ ನೆರವಾಗುವ ಆಶಾಭಾವ ನಿರ್ಮಾಣವಾಗಿದೆ.

ಕದಂಬರ ಕಾಲದಲ್ಲಿ ಅನೇಕ ಕೆರೆಗಳು ಈ ಭಾಗದಲ್ಲಿ ನಿರ್ಮಾಣವಾಗಿವೆ. ನಂತರದ ದಿನದಲ್ಲಿ ಸರ್ಕಾರ ಕೆಲವು ಕೆರೆಗಳನ್ನು ಅಲ್ಪ ಪ್ರಮಾಣದಲ್ಲಿ ಹೂಳು ತೆಗೆದರೂ ಅದು ರೈತರಿಗೆ ಸಂಪೂರ್ಣ ಪ್ರಯೋಜನವಾಗಿಲ್ಲ. ಎಲ್ಲ ಕೆರೆಗಳು ಸಂಪೂರ್ಣ ಹೂಳಿನಿಂದ ಆವೃತವಾಗಿದ್ದು ನೀರಿನ ಸಂಗ್ರಹದ ಸಾಮರ್ಥ್ಯ ಕಡಿಮೆ ಆಗಿದೆ. ಮನುವಿಕಾಸ ಸಂಸ್ಥೆಯಿಂದ ಕೆರೆಯ ಹೂಳನ್ನು ಸಂಪೂರ್ಣವಾಗಿ ಎತ್ತಿದೆ. ಗುಡ್ನಾಪುರದ ಬಂಗಾರೇಶ್ವರ ದೇವಾಲಯವಿರುವ ಗುಡ್ಡತಟಾಕ ಕೆರೆಯನ್ನೂ ಅಭಿವೃದ್ಧಿ ಮಾಡಲಾಗುತ್ತಿದ್ದು 164 ಎಕರೆ ಕ್ಷೇತ್ರದ ದೊಡ್ಡ ಕೆರೆ ಇದಾಗಿದೆ.

ಹಾಡಲಗಿ ಹೊಸಕಟ್ಟಿ, ಮಲ್ಲಾಣಿಕಟ್ಟೆ, ಮಧುರವಳ್ಳಿ ಕೆರೆ, ಕಪಗೆರೆ, ನರೂರು, ಹೊಸೂರು, ತಿಗಣಿ 1, ತಿಗಣಿ 2, ಗುಡ್ನಾಪುರ ಕಂತ್ರಾಜಿ ಕೆರೆಗಳ ಅಭಿವೃದ್ಧಿ ಮಾಡಲಾಗಿದೆ. ಈ ಕೆರೆಗಳ ಹೂಳನ್ನು ತೆಗೆದು ರೈತರ ಹೊಲಗಳಿಗೆ ಸಾಗಿಸಲು ಅನವು ಮಾಡಿಕೊಡುವುದು, ಸುಂದರ ಮತ್ತು ಸಂಚಾರಯೋಗ್ಯ ಬದು ನಿರ್ಮಿಸುವುದು, ಅಲ್ಲಲ್ಲಿ ನೀರು ಬರುವ ಜಾಗದಲ್ಲಿ ಪೈಪ್ ಅಳವಡಿಕೆ, ಹೊರಗಿನಿಂದ ಪುನಃ ಹೂಳು ಬರದಂತೆ ತಡೆಯಲು ಸಿಲ್ಟ್ ಟ್ರಾಪ್ ನಿರ್ಮಾಣ, ನೀರು ಇಂಗಲು ಸಹಕಾರಿಯಾಗುವಂತೆ ಇಂಗುಗುಂಡಿ ನಿರ್ಮಾಣದ ಗುರಿ ಯೋಜನೆ ಹೊಂದಿದೆ.

ಮನುವಿಕಾಸ ಹಾಗೂ ಸುತ್ತಲಿನ ಗ್ರಾಮಸ್ಥರ ಕಾರ್ಯದಿಂದ ಅಂತರ್ಜಲ ಹೆಚ್ಚಳದ ಜೊತೆಗೆ ಜಲ ಪಾತ್ರೆಗಳ ಪುನಶ್ಚೇತನ ಕಾರ್ಯ ಗಮನ ಸೆಳೆಯುತ್ತಿದೆ.







ಶಿರಸಿ: ಬನವಾಸಿ ಭಾಗದ ಕೆರೆಗಳ ಅಭಿವೃದ್ಧಿಯ ನೋಟ.